**ತುಮಕೂರು ವಿಶ್ವವಿದ್ಯಾನಿಲಯ**

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು – 572 103**

**ಸಂಖ್ಯೆ: ತುವಿ:ಶೈ.ವಿ:2025–26:3731** **ದಿನಾಂಕ:27.02.2026.**

## ಸುತ್ತೋಲೆ

**ವಿಷಯ : ಪ್ರಾಂಶುಪಾಲರು ಮತ್ತು ಇತರೆ ಬೋಧಕ ಸಿಬ್ಬಂದಿಗಳ ಹುದ್ದೆಗಳಿಗೆ ಅನುಮೋದನೆ ಪಡೆಯುವ ಕುರಿತು.**

**ಉಲ್ಲೇಖ: 1.ಸಂಖ್ಯೆ: ತುವಿ:ಶೈ.ವಿ:2024–25:2816 ದಿನಾಂಕ:12.11.2024**
**2.ಸಂಖ್ಯೆ: ತುವಿ:ಶೈ.ವಿ:2024–25:3055 ದಿನಾಂಕ:22.01.2025**
**3.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:25.02.2026**

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ(01ಮತ್ತು 02)ರಲ್ಲಿ 2024–25ನೇ ಶೈಕ್ಷಣಿಕ ತರಗತಿಗಳು ಪ್ರಾರಂಭವಾಗುವ ಪೂರ್ವದಲ್ಲಿ ಪ್ರಾಂಶುಪಾಲರು ಮತ್ತು ಇತರೆ ಬೋಧಕ ಸಿಬ್ಬಂದಿಗಳ ಹುದ್ದೆಗಳಿಗೆ ಅನುಮೋದನೆ ಪಡೆಯುವಂತೆ ಹಾಗೂ ತಪ್ಪಿದಲ್ಲಿ ಅನುಮೋದನೆ ಪಡೆಯದಿರುವ ಕಾಲೇಜುಗಳು ವಿಶ್ವವಿದ್ಯಾನಿಯದ ಶೈಕ್ಷಣಿಕ ಕಾರ್ಯಗಳ ಪತ್ರ ವ್ಯವಹಾರಕ್ಕೆ ಅರ್ಹರಿರುವುದಿಲ್ಲವೆಂದು ಈಗಾಗಲೇ ತಿಳಿಸಲಾಗಿದ್ದರೂ ಸಹ ಇದುವರೆಗೂ ಕೆಲವು ಕಾಲೇಜುಗಳು ಬೋಧಕ ಸಿಬ್ಬಂದಿಗಳ ಹುದ್ದೆಗಳಿಗೆ ಅನುಮೋದನೆ ಪಡೆದಿರುವುದಿಲ್ಲ.

ಪ್ರಾಂಶುಪಾಲರು ಮತ್ತು ಇತರೆ ಬೋಧಕ ಸಿಬ್ಬಂದಿಗಳ ಹುದ್ದೆಗಳಿಗೆ NCTE ವಿನಿಯಮದನ್ವಯ ಇನ್ನು ಮುಂದೆ ಪ್ರತಿ ವರ್ಷ ಶೈಕ್ಷಣಿಕ ಪ್ರಾರಂಭದಲ್ಲಿ ಅನುಮೋದನೆಗಾಗಿ ಕಡ್ಡಾಯವಾಗಿ ದಾಖಲೆಗಳನ್ನು ಸಲ್ಲಿಸಿ, ನವೀಕರಣದ ಅನುಮೋದನೆ ಪಡೆಯುವಂತೆ ಮತ್ತೊಮ್ಮೆ ತಿಳಿಸಲಾಗಿದೆ. ತಪ್ಪಿದ್ದಲ್ಲಿ ವಿಶ್ವವಿದ್ಯಾನಿಲಯದ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

ಆದೇಶದ ಮೇರೆಗೆ,

ಉಪಕುಲಸಚಿವರು

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ

ಗೆ,

**ಪ್ರಾಂಶುಪಾಲರು, ಎಲ್ಲಾ ಸಂಯೋಜಿತ ಬಿ.ಇಡಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಿಗೆ ಇ–ಮೇಲ್ ಕಳುಹಿಸುವುದು ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
3. ಕಚೇರಿ ಪ್ರತಿ.